# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 969

ಸದಸ್ಯರ ಹೆಸರು : ಶ್ರೀ. ಡಿ ಎಸ್ ಅರುಣ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 17/12/2024

ಉತ್ತರಿಸುವ ಸಚಿವರು : ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಹೊಸದಾಗಿ ಸರ್ಕಾರ ರಚನೆಯಾದ ನಂತರ ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ, ನಗರ ಪಾಲಿಕೆಗಳನ್ನು ಮೇಲ್ದರ್ಜೆಗೇರಿಸುವ ಬಗ್ಗೆ ಅಧಿಸೂಚನೆ ಹೊರಡಿಸಿದೆಯೇ; ಹಾಗೂ ಗ್ರಾಮ ಪಂಚಾಯಿತಿ ಹಾಗೂ ಪುರಸಭೆ, ನಗರಸಭೆಗಳನ್ನಾಗಿ ಹೊರಡಿಸಿದ್ದಲ್ಲಿ ಪ್ರಸ್ತುತ ಪಾಲಿಕೆಗಳನ್ನು ಮೇಲ್ದರ್ಜೆಗೇರಿಸುವ ಪ್ರಕ್ರಿಯೆ ಯಾವ ಹಂತದಲ್ಲಿದೆ (ಅದರ ಪ್ರತಿ ಲಗತ್ತಿಸುವುದು); | ರಾಜ್ಯದಲ್ಲಿ ಹೊಸದಾಗಿ ಸರ್ಕಾರ ರಚನೆಯಾದ ನಂತರ ಅಧಿಸೂಚಿಸಲ್ಪಟ್ಟಿರುವ ಸ್ಥಳೀಯ ಸಂಸ್ಥೆಗಳು:<br>1. ಕೊಡಗು ಜಿಲ್ಲೆಯ ಪೊನ್ನಂಪೇಟೆ ಪಟ್ಟಣ ಪಂಚಾಯಿತಿ (ಪ್ರತಿಯನ್ನು ಅನುಬಂಧ-1 ರಲ್ಲಿ ಒದಗಿಸಿದೆ)<br>2. ರಾಯಚೂರು ಮಹಾನಗರ ಪಾಲಿಕೆ (ಪ್ರತಿಯನ್ನು ಅನುಬಂಧ-2 ರಲ್ಲಿ ಒದಗಿಸಿದೆ)<br><br>ಪ್ರಸ್ತುತ, ಹಾಸನ ಮತ್ತು ಬೀದರ್ ನಗರಸಭೆಗಳನ್ನು ಮಹಾನಗರ ಪಾಲಿಕೆಗಳನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಗಳಿಗೆ ಸಚಿವ ಸಂಪುಟದ ಅನುಮೋದನೆ ದೊರೆತಿದ್ದು, ಮುಂದಿನ ಕ್ರಮವಹಿಸಲಾಗುತ್ತಿದೆ. ಜೊತೆಗೆ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಿಂದ ಧಾರವಾಡ ಮತ್ತು ಹುಬ್ಬಳ್ಳಿ ಪ್ರತ್ಯೇಕ ಮಹಾನಗರ ಪಾಲಿಕೆಗಳನ್ನಾಗಿ ರೂಪಿಸುವ ಪ್ರಸ್ತಾವನೆ ಸರ್ಕಾರದಲ್ಲಿ ಸ್ವೀಕೃತವಾಗಿದ್ದು, ಪರಿಶೀಲನೆಯಲ್ಲಿರುತ್ತದೆ. |
| ಆ | ಇವುಗಳ ನಿರ್ವಹಣೆ ಮಾಡಲು ಅಧಿಕಾರಿಗಳನ್ನು ನೇಮಕ ಮಾಡಲಾಗಿದೆಯೇ; ಅಥವಾ ಹುದ್ದೆಗಳ ಸೃಜನೆಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲಾಗಿದೆಯೇ (ಸಂಪೂರ್ಣ ಮಾಹಿತಿ ನೀಡುವುದು)? | ರಾಯಚೂರು ನಗರಸಭೆಯನ್ನು ದಿನಾಂಕ:04/12/2024 ರಂದು ಮಹಾನಗರ ಪಾಲಿಕೆಯನ್ನಾಗಿ, ಅಧಿಸೂಚಿಸಿರುವುದರಿಂದ, ನಗರಸಭೆಯ ಅಧಿಕಾರಿ/ನೌಕರರು ಮುಂದುವರೆದಿದ್ದು, ಇನ್ನುಳಿದ ಹುದ್ದೆಗಳಿಗೆ ಅಧಿಕಾರಿ/ನೌಕರರನ್ನು ನಿಯುಕ್ತಿಗೊಳಿಸುವ ಪ್ರಕ್ರಿಯೆ ಪರಿಶೀಲನೆಯಲ್ಲಿರುತ್ತದೆ. |

ಸಂಖ್ಯೆ:ನಅಇ 77 ಎಲ್‌ಸಿಕ್ಯೂ 2024.

(ರಹೀಂ ಖಾನ್)
ಪೌರಾಡಳಿತ ಹಾಗೂ ಹಜ್ ಸಚಿವರು

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೩<br>Part – III | ಬೆಂಗಳೂರು, ಬುಧವಾರ, ೨೪, ಜುಲೈ, ೨೦೨೪(ಶ್ರಾವಣ, ೦೨, ಶಕವರ್ಷ, ೧೯೪೬)<br>BENGALURU, WEDNESDAY, 24, JULY, 2024(SHRAVANA, 02, SHAKAVARSHA, 1946) | ನಂ. ೩೫೨<br>No.352 |
|---|---|---|


## ಕರ್ನಾಟಕ ಸರ್ಕಾರ

**ಸಂಖ್ಯೆ: ನಅಇ 221 ಎಂಎಲ್ಆರ್ 2022(e).**

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, **ದಿನಾಂಕ:24/07/2024.**

## ಅಧಿಸೂಚನೆ

ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ಸೆಕ್ಷನ್-3, 4 ಮತ್ತು 9 ರೊಂದಿಗೆ ಓದಿಕೊಂಡಂತೆ ಸೆಕ್ಷನ್-349, 351 ಮತ್ತು 355(ಬಿ) ರಲ್ಲಿ ಅಗತ್ಯಪಡಿಸಿದಂತೆ ಕೊಡಗು ಜಿಲ್ಲೆಯ ತಾಲೂಕು ಕೇಂದ್ರವಾಗಿರುವ ಪೊನ್ನಂಪೇಟೆ ಗ್ರಾಮ ಪಂಚಾಯಿತಿಯನ್ನು 'ಪರಿವರ್ತನಾ ಪ್ರದೇಶ' ವೆಂದು ಉದ್ಘೋಷಿಸಿ, ಸದರಿ ಪರಿವರ್ತನಾ ಪ್ರದೇಶವನ್ನು 'ಪೊನ್ನಂಪೇಟೆ ಪಟ್ಟಣ ಪಂಚಾಯಿತಿ' ಯ ಪ್ರದೇಶವೆಂದು ನಿರ್ದಿಷ್ಟಪಡಿಸಲು ಪ್ರಸ್ತಾಪಿಸಿ, ಅಧಿಸೂಚನೆ ಸಂಖ್ಯೆ ನಅಇ 221 ಎಂಎಲ್ಆರ್ 2022, ದಿನಾಂಕ:06/03/2024 ನ್ನು ದಿನಾಂಕ 06/03/2024 ರ ಕರ್ನಾಟಕ ವಿಶೇಷ ರಾಜ್ಯ ಪತ್ರದ ಭಾಗ-3 ರ ಸಂಖ್ಯೆ:158 ರಲ್ಲಿ ಪ್ರಕಟಿಸಿ, ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಂದ, ಸದರಿ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿರುವುದರಿಂದ;

ಸದರಿ ರಾಜ್ಯ ಪತ್ರವನ್ನು ಪ್ರಕಟಿಸಿದ ದಿನಾಂಕದಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ನಿಗದಿತ ಅವಧಿಯಲ್ಲಿ ಸ್ವೀಕೃತವಾದ ಸಲಹೆಯನ್ನು ಪರಿಗಣಿಸಿರುವುದರಿಂದ;

ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ಸೆಕ್ಷನ್-3, 4 ಮತ್ತು 9 ರೊಂದಿಗೆ ಓದಿಕೊಂಡಂತೆ ಸೆಕ್ಷನ್-349, 351 ಮತ್ತು 355 ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಘನತೆವೆತ್ತ ರಾಜ್ಯಪಾಲರು ಈ ಕೆಳಗಿನವುಗಳನ್ನು ಗಮನಿಸಿ, 'ಅನುಸೂಚಿ-ಎ' ಮತ್ತು 'ಅನುಸೂಚಿ-ಬಿ'ಯಲ್ಲಿ ನಿರ್ದಿಷ್ಟಪಡಿಸಲಾದ ಪರಿಮಿತಿಯುಳ್ಳ ಕೊಡಗು ಜಿಲ್ಲೆಯ ತಾಲೂಕು ಕೇಂದ್ರವಾಗಿರುವ ಪೊನ್ನಂಪೇಟೆ ಗ್ರಾಮ ಪಂಚಾಯಿತಿಯನ್ನು 'ಪರಿವರ್ತನಾ ಪ್ರದೇಶ' ವೆಂದು ಉದ್ಘೋಷಿಸಿ, ಸದರಿ ಪರಿವರ್ತನಾ ಪ್ರದೇಶವನ್ನು 'ಪೊನ್ನಂಪೇಟೆ ಪಟ್ಟಣ ಪಂಚಾಯಿತಿ' ಯ ಪ್ರದೇಶವೆಂದು ಪದನಾಮೀಕರಿಸಿ ಈ ಮೂಲಕ ಉದ್ಘೋಷಿಸಿರುತ್ತಾರೆ-

1. ಅಂಥ ಪ್ರದೇಶದ ಜನಸಂಖ್ಯೆ ಹತ್ತು ಸಾವಿರಕ್ಕಿಂತ ಕಡಿಮೆಯಿಲ್ಲದ ಮತ್ತು ಇಪ್ಪತ್ತು ಸಾವಿರಕ್ಕಿಂತ ಹೆಚ್ಚಿಲ್ಲದ ಹೊರತು;
2. ಅಂಥ ಪ್ರದೇಶದಲ್ಲಿನ ಜನಸಂಖ್ಯೆಯ ಸಾಂದ್ರತೆಯು ಒಂದು ಚದರ ಕಿಲೋಮೀಟರ್ ಪ್ರದೇಶಕ್ಕೆ ನಾಲ್ಕುನೂರು ನಿವಾಸಿಗಳಿಗಿಂತ ಕಡಿಮೆಯಿಲ್ಲದ ಹೊರತು;
3. ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗದ ಶೇಕಡಾವಾರು ಒಟ್ಟು ಉದ್ಯೋಗದ ಶೇಕಡ ಐವತ್ತಕ್ಕಿಂತ ಕಡಿಮೆಯಿಲ್ಲದ ಹೊರತು;

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
**(ಟಿ ಮಂಜುನಾಥ)**
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಎಂಎ-1&3)

**ಕಡತ ಸಂಖ್ಯೆ:ನಅಇ 221 ಎಂಎಲ್‌ಆರ್ 2022(e).**

**ಶೆಡ್ಯೂಲ್-ಎ**

| **ಜಿಲ್ಲೆ** | **ಮೇಲ್ದರ್ಜೆಗೇರಿಸಿರುವ ಸ್ಥಳೀಯ ಸಂಸ್ಥೆ** | **ಸೇರ್ಪಡೆಗೊಳಿಸಿರುವ ಪ್ರದೇಶಗಳು** | **ಒಟ್ಟು ಪ್ರದೇಶ (ಚ.ಕಿ.ಮೀ.)** |
|---|---|---|---|
| ಕೊಡಗು ಜಿಲ್ಲೆ | ಪೊನ್ನಂಪೇಟೆ ಗ್ರಾಮ ಪಂಚಾಯಿತಿ | <u>ಪೊನ್ನಂಪೇಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ:</u><br>1. ಭಾಗಶಃ ಅರುವತ್ತೊಕ್ಕಲು ಗ್ರಾಮ (ಅರುವತ್ತೊಕ್ಕಲುವಿಗೆ ಸೇರಿದ ನೆಹರೂ ಕಾಲೋನಿ)<br>2. ಭಾಗಶಃ ಹಳ್ಳಿಗಟ್ಟು ಗ್ರಾಮ: (ಹಳ್ಳಿಗಟ್ಟುವಿಗೆ ಸೇರಿದ ಗಣಪತಿನಗರ, ಶಾಂತಿನಗರ, ಮೈತ್ರಿ ಲೇಔಟ್, ಎಂಜಿ ನಗರ, ನಿಸರ್ಗನಗರ)<br>3. ಭಾಗಶಃ ಮತ್ತೂರು ಗ್ರಾಮ: (ಜನತಾಕಾಲೋನಿ, ದತ್ತಾಕರುಂಬಯ್ಯ ಬಡಾವಣೆ, ತ್ಯಾಗರಾಜ ರಸ್ತೆ, ಶಿವಕಾಲೋನಿ, ದೇಚಮ್ಮ ಬಡಾವಣೆ, ಕಾಮತ್ ಬಡಾವಣೆ, ಕಾವೇರಿ ನಗರ)<br>4. ಭಾಗಶಃ ಹುದೂರು ಗ್ರಾಮ: (ಕೃಷ್ಣನಗರ, ಕಾಟ್ರಕೊಲ್ಲಿ)<br>5. ಭಾಗಶಃ ಮುಗುಟಗೇರಿ ಗ್ರಾಮ: (ಕಲ್ಲುಕೋರೆ ತಣ್ಣಿಕೋಡ್, ಭಗವತಿನಗರ, ಪೊನ್ನಪ್ಪ ಲೇಔಟ್, ವಿಜಯನಗರ)<br><u>ಬಲ್ಯಮಂಡೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ:</u><br>ಕಾನೂರು ರಸ್ತೆ ಕಾಲೋನಿ, ಮಾಪಿಳ್ಳೆತೋಡು ಸೇತುವೆ, ಕಾವೇರಮ್ಮ ಬಡಾವಣೆ ಮತ್ತು ಇತರ ಬಡಾವಣೆಗಳನ್ನು ಒಳಗೊಂಡಂತೆ ಸಂಪೂರ್ಣ ಮುಗುಟಗೇರಿ ಗ್ರಾಮ. | 11.34 ಚ.ಕಿ.ಮೀ. |

**ಷೆಡ್ಯೂಲ್-ಬಿ**

**ಉತ್ತರ:** ಪೊನ್ನಂಪೇಟೆ ಗ್ರಾಮ ಪಂಚಾಯಿತಿಯ ಉತ್ತರ ದಿಕ್ಕಿನ ಗಡಿಯ ಸರಹದ್ದು ಅರುತೊಕ್ಕಲು ಗ್ರಾಮದ ಸ.ನಂ.139 ರಿಂದ ಪ್ರಾರಂಭಗೊಂಡು ಪೂರ್ವಾಭಿಮುಖವಾಗಿ ಸಾಗಿ ಸ.ನಂ.138/1, 142/6, 144/2, 171/5, 171/3, 174/10, 163/2 ರಿಂದ ಮುಂದುವರದು, ಸ.ನಂ.163/1 ರ ಕಡಂಗವನ್ನು ಒಳಗೊಂಡಂತೆ ಮತ್ತೂರು ಗ್ರಾಮದ ಸ.ನಂ.1/10 ರಿಂದ ಬಾಳಾಜಿ ಗ್ರಾಮದ ಗಡಿಯ ಮೂಲಕ ಹಾದು ಸ.ನಂ.1/1, 1/3, 1/4, 1/5, 1/6 ರ ಪ್ರದೇಶಗಳನ್ನು ಒಳಗೊಂಡು ಮತ್ತೂರು ಗ್ರಾಮದ ಸ.ನಂ.1/2 ರ ಪ್ರದೇಶದಲ್ಲಿ ಅಂತ್ಯಗೊಳ್ಳುತ್ತದೆ.

**ಪೂರ್ವ:** ಪೊನ್ನಂಪೇಟೆ ಗ್ರಾಮ ಪಂಚಾಯಿತಿಯ ಪೂರ್ವ ದಿಕ್ಕಿನ ಗಡಿಯ ಸರಹದ್ದು ಮತ್ತೂರು ಗ್ರಾಮದ ಭಾಗಶಃ ಪ್ರದೇಶ ಸ.ನಂ.1/2 ರಿಂದ ಪ್ರಾರಂಭಗೊಂಡು ಬಾಳಾಜಿ ಗ್ರಾಮದ ಗಡಿ ಮೂಲಕ ದಕ್ಷಿಣಾಭಿಮುಖವಾಗಿ ಚಲಿಸಿ ಸ.ನಂ.3/4, 3/1, 5/3, 5/10, 5/8, 5/5, 5/2, 5/11, 5/3, 5/7, 5/4, 9/1, 9/2. 10/12, 10/13, 10/14, 10/2, 10/8, 10/3, 68/1, 64, 58, 91/4, 91/1, 92/4, 53, 46/2, 48/1, 44/3, 44/1, 47 ರ ಪ್ರದೇಶಗಳ ಮೂಲಕ ಮತ್ತೂರು ಸ.ನಂ.127 ರಲ್ಲಿನ ತೋಡಿನಲ್ಲಿ ಅಂತ್ಯಗೊಂಡು ಮುಗಟಗೇರಿ ಗ್ರಾಮದ ಸ.ನಂ.9 ರಿಂದ ದಕ್ಷಿಣಾಭಿಮುಖವಾಗಿ ಸಾಗುತ್ತಾ ಸ.ನಂ.24, 50, 51 ರ ತೋಡಿನ ಮೂಲಕ ಹಾದು ಮಗುಟಗೇರಿ ಗ್ರಾಮದ ಸ.ನಂ.62, 63, 54, 56, 57/1 ರ ಮೂಲಕ ಕಾನೂರು ಗ್ರಾಮದ ಗಡಿ ಪ್ರದೇಶವನ್ನು ಒಳಗೊಂಡ ಮತ್ತೂರು ಗ್ರಾಮದ ಸ.ನಂ.79, 80, 99 ರ ಮೂಲಕ ಸಾಗಿ ಮುಗುಟಗೇರಿ ಗ್ರಾಮದ ಸ.ನಂ.100 ರಲ್ಲಿ ಅಂತ್ಯಗೊಳ್ಳುತ್ತದೆ.

**ದಕ್ಷಿಣ:** ಪೊನ್ನಂಪೇಟೆ ಗ್ರಾಮ ಪಂಚಾಯಿತಿಯ ದಕ್ಷಿಣ ದಿಕ್ಕಿನ ಗಡಿಯ ಸರಹದ್ದು ಮುಗುಟಗೇರಿ ಗ್ರಾಮದ ಗಡಿಯನ್ನೊಳಗೊಂಡ ಪ್ರದೇಶ ಸ.ನಂ.100 ರಿಂದ ಪ್ರಾರಂಭವಾಗಿ ಪಶ್ಚಿಮಾಭಿಮುಖವಾಗಿ ಸಾಗುತ್ತಾ ಸ.ನಂ.105/2 ರಲ್ಲಿನ ತೋಡಿನ ಮೂಲಕ ಹಾಯ್ದು, ಸ.ನಂ.106, 107 ರಲ್ಲಿನ ತೋಡು ಸ.ನಂ.109, 144/1, 145 ರಲ್ಲಿನ ಹುದಿಕೇರಿ ಗ್ರಾಮದ ಭಾಗಶಃ ಪ್ರದೇಶವನ್ನು ಒಳಗೊಂಡು ಸ.ನಂ.146/2 ರಲ್ಲಿ ಅಂತ್ಯಗೊಳ್ಳುತ್ತದೆ.

**ಪಶ್ಚಿಮ:** ಪೊನ್ನಂಪೇಟೆ ಗ್ರಾಮ ಪಂಚಾಯಿತಿಯ ಪಶ್ಚಿಮ ದಿಕ್ಕಿನ ಗಡಿಯ ಸರಹದ್ದು ಅರುವತ್ತೊಕ್ಕಲು ಗ್ರಾಮದ ವಾಯವ್ಯ ದಿಕ್ಕಿನ ಪ್ರದೇಶದ ಸ.ನಂ.139 ರಿಂದ ಪ್ರಾರಂಭಗೊಂಡು ದಕ್ಷಿಣಾಭಿಮುಖವಾಗಿ ಚಲಿಸುತ್ತಾ ಸ.ನಂ.131, 132/4, 133, 134/4, 134/2, 134/5, 134/15 ರ ಮೂಲಕ ಸಾಗಿ ಹಳ್ಳಿಗಟ್ಟು ಗ್ರಾಮದ ಸ.ನಂ.14, 41, 39/1, 38, 67, 37, 66, 84, 95, 100, 99, 133 ರ ಪ್ರದೇಶಗಳನ್ನು ಒಳಗೊಂಡು ಅಂತ್ಯಗೊಳ್ಳುತ್ತದೆ. ನಂತರ ಹುದೂರು ಗ್ರಾಮದ ಸ.ನಂ.8/3, 8/2, 8/1, 20/1, 21/3 ರ ಪ್ರದೇಶಗಳನ್ನು ಒಳಗೊಂಡು ಸ.ನಂ.30/3 ರ ತೋಡಿನ ಮೂಲಕ ಹಾಯ್ದು ಸ.ನಂ.30/10, 30/1, 35, 36/50, 36/13, 36/11 ರ ಮೂಲಕ ಸಾಗಿ ಮುಗುಟಗೇರಿ ಗ್ರಾಮದ ಸ.ನಂ. 15/1, 128 ರ ತೋಡು, 35/2, 129 ರಲ್ಲಿನ ರಾಜ್ಯ ಹೆದ್ದಾರಿ ಮಾರ್ಗದ ಪ್ರದೇಶವನ್ನು ಒಳಗೊಂಡು ಸ.ನಂ.130/1, 131, 187 ರ ತೋಡು ಮತ್ತು ಹುದಿಕೇರಿ ಗ್ರಾಮದ ಗಡಿಗೆ ಹೊಂದಿಕೊಂಡಿರುವ ಸ.ನಂ.146/1, 146/2 ರಲ್ಲಿ ಅಂತ್ಯಗೊಳ್ಳುತ್ತದೆ.

**(ಟಿ ಮಂಜುನಾಥ)**
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ (ಎಂಎ-1&3)

# GOVERNMENT OF KARNATAKA

**No.UDD 221 MLR 2022(e)**

Karanataka Government Secretariat,
Vikasasoudha,
Bangalore, **dated 24/07/2024.**

## NOTIFICATION

Whereas the Notification of declaring the Grama Panchayat Area of Ponnampete which is a Taluka Head Quarter of Kodagu District as a Transitional area as mentioned in the Schedule "A" along with boundaries mentioned in Schedule "B" and further to specify as Town Panchayat Area of Ponnampete was published as required by Section-3, 4, 9, 349, 351 and 355 of the Karnataka Municipalities Act, 1964, vide Government Notification No:UDD 221 MLR 2022, dated 06/03/2024 by providing thirty days time and was published in part-III, No.158, Karnataka Gazette Extraordinary, dated 06/03/2024 inviting objections/suggestions from all persons likely to be affected thereby on or before thirty days from the date of publication of the Notification.

And whereas the Notification was made available to the public on the day of publication;

And whereas one suggestion received within the stipulated period was considered;

Now, therefore, in exercise of the powers conferred by Section-3, 4, 9, 349, 351 and 355 of the Karnataka Municipalities Act, 1964 the Hon'ble Governor, hereby notify the Grama Panchayat Area of Ponnampete which is a Taluka Head Quarter of Kodagu District as a Transitional area as mentioned in Schedule-A along with the boundaries mentioned in Schedule-B and further specifying such area to be the "Town Panchayat Area of Ponnampete" having regard to:

i. The population of such area is not less than ten thousand and not more than Twenty thousand;
ii. The density of population in such area is not less than four hundred inhabitants to one square kilometer of area;
iii. The percentage of employment in non-agricultural activities is not less than fifty per cent of the total employment;

By Order and in the name of the
Governor of Karnataka,
**(T Manjunath)**
Under Secretary to Government,
Urban Development Department (MA-1&3)

No. UDD 221MLR 2022(e)

Schedule - A

| District | Local Body upgraded | Places included | Total area (Sq. K.Mtrs ) |
|---|---|---|---|
| Kodagu District | Ponnampete Grama Panchayat | Of Ponnampete Grama Panchayat:<br>1. Partial area of Aruvatthokkalu village (Nehru Colony)<br>2. Partial area of Halligattu village (Ganapathinagar, Shanthinagar, Mythri layout, MG Nagar, Nisarga Nagar)<br>3. Partial area of Matthuru village (Janata Colony, Dattakarumbaiah Colony, Thyagaraj Road, Shiv Colony, Dechamma Colony, Kamat Colony, Kaveri Nagar)<br>4. Partial area of Hudooru village (Krishna Nagar, Katrakolli)<br>5. Partial area of Mugutageri village (Kallukore Thannikod, Bhagavathi Nagar, Ponnappa Layout, Vijay Nagar)<br><br>Of Balyamanduru Grama Panchayat:<br>Complete Mugutageri Village including Kanooru Road Colony, Maapillethodu Bridge, Kaveramma Colony and all other Colonies. | 11.34 Sq. K.Mtrs |

## SCHEDULE-B

**North:** The proposed northern boundary of Ponnampet Grama Panchayat starts at Survey No.139 of Aruvathokkalu Village. While moving towards east the boundary passes through Survey No.138/1, 142/6, 144/2, 171/5, 171/3, 174/10, 163/2 and passes through a Kadanga at Survey Number 163/1 and moves further down including areas adjoin to the boundary of Balaji Village at Survey Number.1/10, 1/1, 1/3, 1/4, 1/5, 1/6 and ends at the area of Survey Number 1/2 of Mathuru village.

**East:** The proposed Eastern boundary of Ponnampet Gram Panchayat starts at partial area at survey number 1/2 of Mathuru village. Moving southwards along the village boundary of Balaji Village it passes through Survey Numbers 3/4, 3/1, 5/3, 5/10, 5/8, 5/5, 5/2,5/11, 5/3, 5/7, 5/4, 9/1, 9/2, 10/12, 10/13, 10/14, 10/2, 10/8, 10/3, 68/1, 64, 58,

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



91/4, 91/1, 92/4, 53, 46/2, 48/1, 44/3, 44/1, 47 of Mathuru village and ends at a stream at survey Number 127 of Mugutageri Village. Further the proposed boundary moving towards south from the Survey Number 9 of Mugutageri Village passes through areas of Survey Numbers 62, 63, 54, 56 and 57/1 while adjoining borders of Kanooru village at Survey numbers 79, 80 and 99 ends at Survey Number 100 of Mugutageri village.

**South:** The proposed Southern boundary of Ponnampet Gram Panchayat starts at Survey Number 100 of Mugutageri village at South east. Further it moves towards west through a stream at Survey Number 105/2 of Mugutageri village, and survey number 106, 107, 109, 144/1, 145- Bordering Hudikeri Village to end at survey number 146/2 of Mugutageri village.

**West:** The proposed western boundary of Pornnampet Gram Panchayat begins at Survey Number 139 of Aruvathokkalu village at North West direction. Further it moves towards down south via survey numbers 131, 132/4, 133, 134/4, 134/2, 134/5, 134/15 to end Halligattu village while covering areas of survey Numbers 14, 41, 39/1, 38, 67, 37, 66, 84, 95, 100, 99, 133 of Halligattu village. Further the proposed boundary continues from survey Numbers of 8/3, 8/2, 8/1, 20/1 and 21/3 of Hudooru Village and passes through a stream at survey number 30/3 and further continues through Survey Numbers 30/10, 30/1, 35, 36/50, 36/13, 36/11 to move towards Survey Numbers 15/1, 35/2, 129 including a stream at survey number 128. The boundary further cuts across State Highway at 35/2 and 129 and ends at 146/2 of Mugutageri village while passing through a stream at survey number 187 and areas of survey number 130/1, 131, 146/1 which are adjacent to borders of Hudikeri Village.

**(T Manjunath)**
Under Secretary to Government,
Urban Development Department (MA-1&3)

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH

# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| ಭಾಗ - ೩<br>Part – III | ಬೆಂಗಳೂರು, ಬುಧವಾರ, ೦೪, ಡಿಸೆಂಬರ್, ೨೦೨೪(ಮಾರ್ಗಶಿರ, ೧೩, ಶಕವರ್ಷ, ೧೯೪೬)<br>BENGALURU, WEDNESDAY, 04, DECEMBER, 2024(MARGASHIRA, 13, SHAKAVARSHA, 1946) | ನಂ. ೫೯೧<br>No.591 |
|---|---|---|


## ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 139 ಎಂಎಲ್‌ಆರ್ 2022(e)

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 04/12/2024.

## ಅಧಿಸೂಚನೆ

ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ರ ಸೆಕ್ಷನ್-3, 4 ಮತ್ತು 503 ನೇ ಪ್ರಕರಣದಲ್ಲಿ ಅಗತ್ಯಪಡಿಸಿದಂತೆ ರಾಯಚೂರು ಜಿಲ್ಲೆಯ "ರಾಯಚೂರು ನಗರಸಭೆ ಪ್ರದೇಶ" ವನ್ನು 'ದೊಡ್ಡ ನಗರ ಪ್ರದೇಶ' ವೆಂದು ಘೋಷಿಸಲು ಹಾಗೂ ಸದರಿ 'ದೊಡ್ಡ ನಗರ ಪ್ರದೇಶ' ವನ್ನು "ರಾಯಚೂರು ಮಹಾನಗರ ಪಾಲಿಕೆ" ಪ್ರದೇಶವೆಂದು ನಿರ್ದಿಷ್ಟಪಡಿಸಲು ಪ್ರಸ್ತಾಪಿಸಿ, ಅಧಿಸೂಚನೆ ಸಂಖ್ಯೆ ನಅಇ 132 ಎಂಎಲ್‌ಆರ್ 2022; ದಿನಾಂಕ:16/10/2024 ನ್ನು ದಿನಾಂಕ:16/10/2024 ರ ಕರ್ನಾಟಕ ವಿಶೇಷ ರಾಜ್ಯ ಪತ್ರದ ಭಾಗ-3 ರ ಸಂಖ್ಯೆ:466 ರಲ್ಲಿ ಪ್ರಕಟಿಸಿ, ಇದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಂದ ಸದರಿ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿ;

ಸದರಿ ರಾಜ್ಯ ಪತ್ರವನ್ನು ಪ್ರಕಟಿಸಿದ ದಿನಾಂಕದಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ನಿಗದಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ/ಸಲಹೆ ಸ್ವೀಕೃತವಾಗದೇ ಇರುವುದರಿಂದ;

ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ರ ಸೆಕ್ಷನ್-3, 4 ಮತ್ತು 503 ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಘನತೆವೆತ್ತ ರಾಜ್ಯಪಾಲರು ಈ ಕೆಳಗಿನವುಗಳನ್ನು ಗಮನಿಸಿ, ಆಡಳಿತಾತ್ಮಕ ಹಿತದೃಷ್ಟಿಯಿಂದ 'ಅನುಸೂಚಿ-ಎ' ಮತ್ತು 'ಅನುಸೂಚಿ-ಬಿ' ರಲ್ಲಿರುವಂತೆ ರಾಯಚೂರು ಜಿಲ್ಲೆಯ "ರಾಯಚೂರು ನಗರಸಭೆ ಪ್ರದೇಶ" ವನ್ನು 'ದೊಡ್ಡ ನಗರ ಪ್ರದೇಶ' ವೆಂದು ಉದ್ಘೋಷಿಸಿ ಹಾಗೂ ಸದರಿ 'ದೊಡ್ಡ ನಗರ ಪ್ರದೇಶ' ವನ್ನು "ರಾಯಚೂರು ಮಹಾನಗರ ಪಾಲಿಕೆ" ಪ್ರದೇಶವೆಂದು ಪದನಾಮೀಕರಿಸಿ ಈ ಮೂಲಕ ಉದ್ಘೋಷಿಸಿರುತ್ತಾರೆ:

1. ಅಂಥ ಪ್ರದೇಶದ ಜನಸಂಖ್ಯೆ ಮೂರು ಲಕ್ಷಕ್ಕಿಂತ ಕಡಿಮೆಯಿಲ್ಲದ ಹೊರತು;
2. ಅಂಥ ಪ್ರದೇಶದಲ್ಲಿನ ಜನಸಂಖ್ಯೆಯ ಸಾಂದ್ರತೆಯು ಒಂದು ಚದರ ಕಿಲೋಮೀಟರ್ ಪ್ರದೇಶಕ್ಕೆ ಮೂರು ಸಾವಿರ ನಿವಾಸಿಗಳಿಗಿಂತ ಕಡಿಮೆಯಿಲ್ಲದ ಹೊರತು;

3. ಹಿಂದಿನ ನಿಕಟಪೂರ್ವ ಜನಗಣತಿಯಲ್ಲಿ ಅಂಥ ಪ್ರದೇಶದಿಂದ ಸ್ಥಳೀಯ ಆಡಳಿತಕ್ಕಾಗಿ ತೆರಿಗೆ ಮತ್ತು ತೆರಿಗೆಯಿಲ್ಲದ ಇತರ ಸಂಪನ್ಮೂಲಗಳಿಂದ ಉತ್ಪಾದಿತವಾದ ರಾಜಸ್ವ ವಾರ್ಷಿಕ ಆರು ಕೋಟಿ ರೂಪಾಯಿಗಳು ಅಥವಾ ವಾರ್ಷಿಕ ತಲಾ ಒಬ್ಬನಿಗೆ ಎರಡು ನೂರು ರೂಪಾಯಿಗಳ ದರದಂತೆ ಲೆಕ್ಕ ಹಾಕಲಾದ ಮೊತ್ತ ಇವೆರಡರಲ್ಲಿ ಯಾವುದು ಹೆಚ್ಚೋ ಆ ಮೊತ್ತಕ್ಕಿಂತ ಕಡಿಮೆಯಿರದ ಹೊರತು:
4. ಅಂಥ ಪ್ರದೇಶದಲ್ಲಿ ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗದ ಶೇಕಡಾವಾರು ಒಟ್ಟು ಉದ್ಯೋಗದ ಶೇಕಡ ಐವತ್ತಕ್ಕಿಂತ ಕಡಿಮೆಯಿಲ್ಲದ ಹೊರತು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ. ಮಂಜುನಾಥ)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

**ಕಡತ ಸಂಖ್ಯೆ: ನಅಇ 139 ಎಂಎಲ್ಆರ್ 2022(e)**

**ಶೆಡ್ಯೂಲ್ – ಎ**

| **ಜಿಲ್ಲೆ** | **ಮೇಲ್ದರ್ಜೆಗೇರಿಸಿರುವ ಸ್ಥಳೀಯ ಸಂಸ್ಥೆ ಹೆಸರು** | **ಸೇರ್ಪಡೆಗೊಳಿಸಿರುವ ಪ್ರದೇಶಗಳು** | **ಒಟ್ಟು ಪ್ರದೇಶ** |
|---|---|---|---|
| ರಾಯಚೂರು | ರಾಯಚೂರು ನಗರಸಭೆ | ರಾಯಚೂರು ನಗರಸಭೆ | 43.85 ಚದರ ಕಿ.ಮೀ. |

**ಷೆಡ್ಯೂಲ್ - ಬಿ**

ರಾಯಚೂರು ನಗರಸಭೆಯ ಸರಹದ್ದುಗಳು ರಾಯಚೂರು ಹಳ್ಳಿಯ ದಕ್ಷಿಣ ಪಶ್ಚಿಮ ಮೂಲೆಯಿಂದ ಪ್ರಾರಂಭಗೊಂಡು ಮತ್ತು ದಕ್ಷಿಣ ಮೂಲೆಗೆ ತಿರುಗುತ್ತಾ ಸರ್ವೆ ನಂ. ಗಳು 2, 1, 175, 174, 171 ಮತ್ತು ಪಿ. ಡಬ್ಲ್ಯೂ. ಡಿ. ರಸ್ತೆಯನ್ನು ಹಾದು ಸ. ನಂಬರುಗಳು 22, 21 ಮತ್ತು ರೈಲ್ವೆ ಪಟ್ಟಿಯನ್ನು ಹಾಯುತ್ತಾ ಸರ್ವೆ ನಂಬರುಗಳು 1414, 1413, 1411 ಪೂರ್ವ ಮೂಲೆಗೆ ತಿರುಗುತ್ತಾ ಸರ್ವೆ ನಂಬರುಗಳು 1436, 1434, 1435, 1122, 1160, 1125 ಪೂರ್ವ ದಿಕ್ಕಿಗೆ ತಲುಪುತ್ತಾ ಸರ್ವೆ ನಂಬರಗಳು 1128, 1130, 1192, 891, 809, 737, 756, 640, 641, 638, 607, 591, 570, 571, 446, 445, 443, 395, 397, 401 ಗಳು ಈ ರಾಯಚೂರು ಸರ್ವೆ ನಂಬರುಗಳಿಂದ ದಕ್ಷಿಣ ಮೂಲೆಗಿರುವ ಪೋತಗಲ್ ಸ.ನಂ. 204, 203 ಮುಖಾಂತರ ಉತ್ತರ ದಿಕ್ಕಿಗೆ ತಿರುಗುತ್ತಾ ಸರ್ವೆ ನಂ. ನಂಬರುಗಳು 207, 136, 134, 330 ಮತ್ತು ಪಿ. ಡಬ್ಲ್ಯೂ. ಡಿ. ರಸ್ತೆಯನ್ನು ಹಾದು ಸ. ನಂ. ಗಳು 8, 9, 10ಗಳ ಮುಖಾಂತರ ಪೋತಗಲ್ ಹಳ್ಳಿಯ ಮೂಲೆಯನ್ನು ತಲುಪುತ್ತದೆ. ಅಲ್ಲಿಂದ ಪೋತಗಲ್, ಯರಮರಸ್ ಕಡೆಗೆ ತಿರುಗುತ್ತಾ ಪೋತಗಲ್ ಸರ್ವೆ ನಂ.ಗಳು 306, 302, 291, 209, 288, 282, 281 ಮತ್ತು ಸರ್ವೆ ನಂಬರುಗಳು 78, 76, 70, 72, 75, 55 ಮತ್ತು ಪಿ. ಡಬ್ಲ್ಯೂ. ಡಿ. ರಸ್ತೆಯನ್ನು ಹಾಯುತ್ತಾ ಸರ್ವೆ ನಂ. 50 ಮತ್ತು ಯರಮರಸ್ ಹತ್ತಿರವಿರುವ ರೈಲ್ವೆ ಪಟ್ಟಿಯ ಮುಖಾಂತರ ಯರಮರಸ್ ಹಳ್ಳಿಯ ಪಶ್ಚಿಮ ಭಾಗದ ಸರ್ವೆ ನಂ. ಗಳು 47, 44, 40 ಮತ್ತು 19 ಅಲ್ಲಿಂದ ಯರಮರಸ್ ಹಳ್ಳಿಯ ದಕ್ಷಿಣ ಸರಹದ್ದಿನ ರೇಖೆ ಸರ್ವೆ ರಾಯಚೂರಿನ

ಸರ್ವೆ ನಂಬರುಗಳು 129, 128, 123, 120, 122, 130:1, 114, 113, 118, 37, 52, 57, 56 ಪಿ.ಡಬ್ಲ್ಯೂ.ಡಿ. ರಸ್ತೆಯನ್ನು ಹಾಯ್ದು ಅಲ್ಲಿಂದ ಸರ್ವೆ ನಂ.ಗಳು ಎಕ್ಲಾಸಪುರ ಹಳ್ಳಿಯ ಸರ್ವೆ ನಂ.ಗಳು 153, 154, 151, 111 ಮತ್ತು ಸ. ನಂ. 215, 211, 218, 209 ಮತ್ತು ರೈಲ್ವೆ ಪಟ್ಟಿಯನ್ನು ಹಾಯುತ್ತಾ ಅಸ್ಕಿಹಾಳ ಗ್ರಾಮದ ಸ. ನಂ. 51, 47, 46, 44, 43 ಮತ್ತು 41 ಗಳನ್ನು ತಲುಪುತ್ತಾ ರಾಂಪುರ ಹಳ್ಳಿಯ ದಕ್ಷಿಣ ಪಶ್ಚಿಮದ ಮೂಲೆಗೆ ತಲುಪುವ ಸರ್ವೆ ನಂ.ಗಳು 349, 351, 355 ಮತ್ತು ಸರ್ವೆ ನಂ.ಗಳು 2, 17, 27 ಮತ್ತು ಪಿ.ಡಬ್ಲ್ಯೂ.ಡಿ. ರಸ್ತೆಯ ಮುಖಾಂತರ ಸ.ನಂ.ಗಳು 21 ಮತ್ತು ಅಲ್ಲಿಂದ ಹೊಸೂರು ಹಳ್ಳಿಯ ರೈಲ್ವೆ ಪಟ್ಟಿಯನ್ನು ಹಾಯುತ್ತಾ ಸರಹದ್ದಿನ ಪ್ರಾರಂಭ ರೇಖೆಯನ್ನು ತಲುಪುತ್ತದೆ.

**GOVERNMENT OF KARNATAKA**

**No.UDD 139 MLR 2022(e)**

Karnataka Government Secretariat,
Vikasa Soudha,
Bangalore, **dated 04/12/2024.**

**NOTIFICATION**

Whereas the Notification to declare the City Municipal Area of Raichur of Raichur District as a Larger Urban Area and further to specify such Area as 'The Corporation of the City of Raichur' as mentioned in the Schedule-A along with boundaries mentioned in Schedule-B was published as required by section-3 read with section-9 and 503 of the Karnataka Municipal Corporations Act 1976, vide Government Notification No:UDD 139 MLR 2022, dated 16/10/2024 by providing thirty days time and was published in Part-III, No.466, Karnataka Gazette Extraordinary, dated 16/10/2024 inviting objections/suggestions from all the persons likely to be affected thereby on or before thirty days from the date of publication of the above Notification.

And whereas the Notification was made available to the public on the day of publication;

And whereas no objection/suggestion has been received within the stipulated period;

Now, therefore, in exercise of the powers conferred by Section 3, 4 and 503 of the Karnataka Municipal Corporations Act 1976, the Hon'ble Governor, hereby notify the City Municipal Area of Raichur as a "Larger Urban Area" and further specifying such area to be 'The Corporation of the City of Raichur' as mentioned in Schedule–A, along with the boundaries mentioned in Schedule-B, for the purpose of administration having regard regards to:

i. The population of such area is not less than three lakhs;
ii. The density of population in such area is not less than three thousand inhabitants to one square kilometer of area;
iii. The revenue generated for local administration from such area from tax and non-tax sources in the year of the last preceding census is not less than rupees six crores per annum or a sum calculated at the rate of rupees two hundred per capita per annum, whichever is higher;
iv. The percentage of employment in non-agricultural activities is not less than fifty per cent of the total employment.

By Order and in the name of the
Governor of Karnataka,

**(T. Manjunath)**
Under Secretary to Government,
Urban Development Department

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



**No.UDD 139 MLR 2022(e).**

**Schedule - A**

| District | ULB upgraded | Areas included | Total area |
|---|---|---|---|
| **1** | **2** | **3** | **4** |
| Raichur | Raichur City Municipal Council | Raichur City Municipal Council | 43.85 Sq. K.Mtrs |

**SCHEDULE-B**

The boundaries of Raichur City Municipal Council Area starts from South-West corner of Raichur village and turn towards S.No.2, 1, 175, 174, 171 and pass through PWD Road. Then pass through S.No.22, 21 and Railway line and moves towards S.No.1414, 1413, 1411 at the East corner, Then reaches at S.No.1436, 1434, 1435, 1122, 1160, 1125 at the East direction and then from S.No.1128, 1130, 1192, 891, 809, 737, 756, 640, 641, 638, 607, 591, 570, 571, 446, 445, 443, 395, 397, 401 of Raichur moves to S.No.204, 203 of Pothgal at South Corner, then turning to North direction moves through S.No.207, 136, 134, 330 and PWD Road and reaches the corner of Pothgal village through S.No.8, 9 and 10. Then, turning towards Pothgal, Yaramaras passes through S.No.306, 302, 291, 209, 288, 282, 281 of Pothgal and S.No.78, 76, 70, 72, 75, 55 and PWD Road, Then passes through S.No.50 and Railway line near Yaramaras, S.No.47, 44, 40 & 19 of West part of Yaramaras village. Then, passes through S.No.129, 128, 123, 120, 122, 130, 1, 114, 113, 118, 37, 52, 57, 56, and PWD Road, then passes through S.No.153, 154, 151, 111 & 215, 211, 218, 29 of Eklaspur village and crosses the Railway line, Then, reaches S.No.51, 47, 46, 44, 43 & 41 of Askihal village and then reaches S.No.349, 351, 355 that reaches South-West corner of Rampur village and then reaches S.No.21 through S.No.2, 17, 27 and PWD Road. And from there it passes through Railway line of Hosuru village and reaches starting point.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH